# ವರ್ಣವ್ಯವಸ್ಥೆ

ವಿದ್ವಾನ್ ಹಿತ್ಲಹಳ್ಳಿ ಸೂರ್ಯನಾರಾಯಣ ಭಟ್ಟ

ಜಾತಿಪದ್ಧತಿ ಒಂದು ಜಟಿಲವಾದ ಸಮಸ್ಯೆ. ಭಾವೋದ್ವೇಗಕ್ಕೆ ಒಳಗಾಗದೆ ವೈಚಾರಿಕವಾಗಿ ಅದರ ಬಗ್ಗೆ ಚಿಂತಿಸುವುದು ಅಗತ್ಯ. ಈ ಲೇಖನದಲ್ಲಿ ಜಾತಿಪದ್ಧತಿಯ ಒಂದು ನಿಷ್ಪಕ್ಷಪಾತವಾದ ಚಿತ್ರಣವನ್ನು ಲೇಖಕರು ನೀಡಿದ್ದಾರೆ. ಸಂಸ್ಕೃತ ವಿದ್ವಾಂಸರಾದ ಶ್ರೀ ಸೂರ್ಯನಾರಾಯಣ ಭಟ್ಟರು ಸಂಶೋಧಕರು ಮತ್ತು ಕೆಲವು ಗ್ರಂಥಗಳನ್ನು ರಚಿಸಿರುವರು.

**ಚಾತುರ್ವರ್ಣ್ಯ** ಅಥವಾ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳನ್ನು ಪರಮಾತ್ಮನೇ ಸೃಷ್ಟಿಸಿರುವನೆಂದು ಭಗವದ್ಗೀತೆಯಲ್ಲಿ ಹೀಗೆ ಹೇಳಿದೆ : **ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ** (ಗೀತಾ, ೪.೧೩). ಗುಣಗಳು ಮತ್ತು ಕರ್ಮಗಳು—ಇವುಗಳ ವಿಭಾಗವನ್ನು ಗಮನದಲ್ಲಿಟ್ಟುಕೊಂಡು ಅವುಗಳ ಸೃಷ್ಟಿಯಾಗಿದೆಯೆಂದು ಇಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

## ಗುಣ ವಿಭಾಗ

ಗುಣ ಎಂಬ ಶಬ್ದಕ್ಕೆ ಅನೇಕ ಅರ್ಥಗಳಿವೆ. ಅಂಕಗಳು (mark ) ಎಂದು ಜ್ಯೋತಿಃಶಾಸ್ತ್ರದಲ್ಲಿ ಹೇಳಿದರೆ, ರೂಪ-ರಸ ಮುಂತಾದವು ಎಂದು ತರ್ಕಶಾಸ್ತ್ರದಲ್ಲಿ ಹೇಳಿರುತ್ತಾರೆ. ಸಂಧಿ-ವಿಗ್ರಹ ಮುಂತಾದವು ಗುಣಗಳೆಂದು ಅರ್ಥಶಾಸ್ತ್ರದಲ್ಲಿ ನಿರೂಪಿಸಿದ್ದರೆ, ಶೌರ್ಯ-ಔದಾರ್ಯ ಮುಂತಾದುವು ಆ ಶಬ್ದದ ಅರ್ಥವೆಂದು ಲೋಕರೂಢಿಯಲ್ಲಿದೆ. ಆದರೆ ಭಗವದ್ಗೀತೆ ಯೋಗಶಾಸ್ತ್ರವಾಗಿರುವುದರಿಂದ ಸಾಂಖ್ಯ-ಯೋಗದಲ್ಲಿ ಸುಪ್ರಸಿದ್ಧವಾದ ಗುಣಗಳನ್ನು ಗ್ರಹಿಸಬೇಕು. ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂದು ಗುಣಗಳು ಮೂರು — **ಸತ್ತ್ವಂ ರಜಸ್ತಮ ಇತಿ ಗುಣಾಃ** (ಗೀತಾ, ೧೪.೫) ಎಂದು ಅಲ್ಲಿಯೇ ಮುಂದೆ ಹೇಳಿದೆ.

ವ್ಯಕ್ತಿಯು ಸಂಬಳಕ್ಕೆ ಇನ್ನೊಬ್ಬರಿಗಾಗಿ ದುಡಿಯುತ್ತಿರುವಾಗ ಅವನು ಶೂದ್ರ. ಅವನು ಲಾಭಕ್ಕಾಗಿ ಇತರರೊಡನೆ ವ್ಯವಹಾರ ನಡೆಸುತ್ತಿರುವಾಗ ವೈಶ್ಯ. ಅವನು ಧರ್ಮದ ಪರವಾಗಿ ಅಧರ್ಮದ ವಿರುದ್ಧವಾಗಿ ಯಾವಾಗ ಹೋರಾಡುತ್ತಿರುವನೊ ಆಗ ಕ್ಷತ್ರಿಯ. ಯಾವಾಗ ಅವನು ಭಗವಂತನ ಧ್ಯಾನದಲ್ಲಿ ಮತ್ತು ಅವನನ್ನು ಇತರರಿಗೆ ಬೋಧಿಸುವುದರಲ್ಲಿ ಕಾಲ ಕಳೆಯುವನೊ ಆಗ ಬ್ರಾಹ್ಮಣ.

—*ಸ್ವಾಮಿ ವಿವೇಕಾನಂದ*

ಗುಣವೆಂದರೆ ಹಗ್ಗವೆಂಬ ಅರ್ಥವೂ ಇದೆ. ಸತ್ತ್ವ, ರಜಸ್ಸು ಮತ್ತು ತಮಸ್ಸು ದನದ ದಾವಿನಂತೆ ಒಂದನ್ನೊಂದು ಸೇರಿಕೊಂಡಿರುವುದರಿಂದ ಗುಣವೆಂಬ ಹೆಸರು ಬಂದಿದೆ. ಸಣಬನ್ನು ಹೊಸೆದು ಒಂದರೊಳಗೊಂದು ಸೇರಿಸಿ ದೀಪಾವಳಿಯಲ್ಲಿ ಗೋವನ್ನು ಕಟ್ಟಲು ದಾವು (ಡಾಬು) ಮಾಡುವ ರೂಢಿ ಇಂದಿಗೂ ಹಳ್ಳಿಗಳಲ್ಲಿ ಕೆಲವೆಡೆ ಉಳಿದಿದೆ. ಅದನ್ನು ನೆನಪಿಸುವ ಸತ್ತ್ವ ಮುಂತಾದವೂ ಗುಣಗಳೆಂದು ಆಲಂಕಾರಿಕವಾಗಿ ಕರೆಯಲಾಗಿದೆ. ಹಗ್ಗದಿಂದ ಹಸುವನ್ನು ಕಟ್ಟುವಂತೆ ಈ ಗುಣಗಳೂ ಜೀವಿಯನ್ನು ಬಂಧಿಸುತ್ತವೆ. ಸತ್ತ್ವವು ಸುಖಸಂಗದಿಂದಲೂ, ರಜಸ್ಸು ಕರ್ಮ ಸಂಗದಿಂದಲೂ, ತಮಸ್ಸು ಪ್ರಮಾದ-ಆಲಸ್ಯ-ನಿದ್ರೆಗಳಿಂದಲೂ ಜೀವಿಯನ್ನು ಬಂಧಿಸುವುದೆಂದು ಗೀತೆಯಲ್ಲಿ (೧೪. ೬-೮) ಹೇಳಲಾಗಿದೆ.

ಗುಣ ಎಂದರೆ ಅಪ್ರಧಾನ ಅಥವಾ ಅಂಗ ಎಂಬ ಅರ್ಥ ಮೀಮಾಂಸಾ ಶಾಸ್ತ್ರದಲ್ಲಿದೆ (ಪೂರ್ವಮೀಮಾಂಸಾ ೨.೨.೯). ಜಗತ್ತಿನ ಕಾರಣವನ್ನು ಪ್ರಧಾನ (ಪ್ರಕೃತಿ ಅಥವಾ ಮಾಯೆ) ಎನ್ನುವುದುಂಟು (ಗೀತೆ, ೭.೪-೬). ಅದು ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬ ಮೂರರ ಸಾಮ್ಯಾವಸ್ಥೆ. ಈ ಮೂರು ಅಲ್ಲಿ ಸಮಾನವಾಗಿ ಇರುತ್ತವೆ. ಅದು ಪ್ರಧಾನವಾದರೆ ಅದರ ಘಟಕಗಳು ಅಪ್ರಧಾನ ಅಥವಾ ಗುಣ ಎಂಬುದು ಸ್ಪಷ್ಟವೇ ಆಗಿದೆ. ಜೀವಿಯು ಮುಖ್ಯನೆಂದಾದರೆ, ಅವನ ಸಲಕರಣೆಗಳಂತಿರುವ ಈ ಮೂರು ಅವನ ಗುಣಗಳಂತಿವೆ. ಈ ಗುಣಗಳು ಪ್ರಕೃತಿಯಲ್ಲಿವೆ, ಪುರುಷನಲ್ಲಿಲ್ಲ ಎಂಬುದು ತಿಳಿದರೆ ಪುರುಷನು ಮುಕ್ತನಾಗುತ್ತಾನೆ. (ಪ್ರಕೃತಿ-ಪುರುಷರ ವಿವೇಕದಿಂದ ಮೋಕ್ಷ ಎಂದು ಸಾಂಖ್ಯಕಾರಿಕೆಯಲ್ಲಿದೆ). ಅವು ತಮ್ಮ ಪ್ರಭಾವವನ್ನು ಬೀರುವವರೆಗೆ ಪ್ರಪಂಚದಲ್ಲಿರುವುದು ಅನಿವಾರ್ಯ.

ಪ್ರಕೃತಿಯಲ್ಲಿ ಸಮಾನವಾಗಿರುವ ಗುಣಗಳು ಪ್ರಪಂಚದಲ್ಲಿ ವಿಷಮವಾಗಿರುತ್ತವೆ. ಒಮ್ಮೆ ಸತ್ತ್ವವು ಹೆಚ್ಚಾದರೆ ಇನ್ನೊಮ್ಮೆ ರಜಸ್ಸು ಹೆಚ್ಚಾಗುತ್ತದೆ. ಇವೆರಡನ್ನೂ ಹಿಮ್ಮೆಟ್ಟಿಸಿ ತಮಸ್ಸು ಮೆರೆಯುವುದೂ ಉಂಟು (ಗೀತಾ ೧೪.೧೦). ಈ ಗುಣಗಳ ಹೋರಾಟವು ನಿರಂತರವಾಗಿ ನಡೆಯುತ್ತಿರುತ್ತದೆ. ಸಾತ್ತ್ವಿಕನು ರಾಜಸನಾಗುವುದೂ ರಾಜಸನು ತಾಮಸನಾಗುವುದೂ ಇದರಿಂದಲೇ. ಎಲ್ಲ ವಸ್ತುಗಳನ್ನೂ ಎಲ್ಲ ಜೀವಿಗಳನ್ನೂ ಈ ಮೂರು ವರ್ಗಗಳಲ್ಲಿ ವಿಭಾಗಿಸಬಹುದು. ಇದರಲ್ಲಿ ಸಾತ್ತ್ವಿಕನು ಬ್ರಾಹ್ಮಣನೆಂದೂ ತಾಮಸನು ಶೂದ್ರನೆಂದೂ ರಜಸ್ಸಿನಲ್ಲಿ ಎರಡು ವಿಭಾಗ ಮಾಡಿ ಸತ್ತ್ವವು ಹೆಚ್ಚಾದರೆ ಕ್ಷತ್ರಿಯನೆಂದೂ ತಮಸ್ಸು ಹೆಚ್ಚಾದರೆ ವೈಶ್ಯನೆಂದೂ ಹೇಳಬಹುದು. ಆದರೆ ಕ್ರಮೇಣ ಸಮಾಜದಲ್ಲಿ ಈ ಗುಣವಿಭಾಗದ ಪಾತ್ರ ಮರೆಯಾಗಿ ಜಾತಿವ್ಯವಸ್ಥೆ ಹಾಸ್ಯಾಸ್ಪದವಾಗಿ ಕಾಣುವಂತೆ ಆಗಿದೆ.

ವೇದದಲ್ಲಿಯೇ ಈ ನಾಲ್ಕು ವರ್ಣಗಳ ಉಲ್ಲೇಖವಿದೆ (ಪುರುಷಸೂಕ್ತ ೧೨.೨೩). ಪುರುಷನ ಮುಖ ಯಾವುದು? ಭುಜಗಳು

ಯಾವವು? ತೊಡೆಗಳು ಯಾವವು? ಪಾದಗಳು ಯಾವವು? ಎಂಬ ಪ್ರಶ್ನೆಗೆ ಉತ್ತರವಾಗಿ, ಬ್ರಾಹ್ಮಣನು ಮುಖವಾಗಿದ್ದನು, ಕ್ಷತ್ರಿಯನು ಭುಜಗಳಾಗಿ ಮಾಡಲ್ಪಟ್ಟನು, ಇವನ ತೊಡೆಗಳು ವೈಶ್ಯನು, ಕಾಲಿನಿಂದ ಶೂದ್ರನು ಜನಿಸಿದನು ಎಂದು ಹೇಳಿದೆ. ಇಲ್ಲಿಯ ಪ್ರಶ್ನೆ ಮತ್ತು ಉತ್ತರ—ಎರಡೂ ಅಸಾಧಾರಣವಾಗಿದೆ. ಯಾರೇ ಆಗಲಿ, ಪುರುಷನ ಮುಖ, ಭುಜ, ತೊಡೆ ಮತ್ತು ಕಾಲುಗಳ ಬಗ್ಗೆ ಇಂತಹ ಪ್ರಶ್ನೆಗಳನ್ನು ಕೇಳುವ ಸಂಭವವಿಲ್ಲ. ಉತ್ತರವಾದರೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದಿರುವ ಸಂಭವ ತೀರಾ ಕಡಿಮೆ. ಈ ಕಾರಣದಿಂದಲೇ ಇಲ್ಲಿ ಕೇವಲ ಶಬ್ದಗಳ ಅರ್ಥವಲ್ಲದೆ ಬೇರೆ ಏನೋ ಇದೆ ಎಂದು ಯಾರಿಗಾದರೂ ಭಾಸವಾಗುತ್ತದೆ.

> ಜಾತಿರತ್ರ ಮಹಾಸರ್ಪ ಮನುಷ್ಯತ್ವೇ ಮಹಾಮತೇ |
> ಸಂಕರಾತ್ ಸರ್ವವರ್ಣಾನಾಂ ದುಷ್ಪರೀಕ್ಷ್ಯೇತಿ ಮೇ ಮತಿಃ ||
> ತಸ್ಮಾತ್ ಶೀಲಂ ಪ್ರಧಾನೇಷ್ಟಂ ವಿದುರ್ಯೇ ತತ್ತ್ವದರ್ಶಿನಃ ||
>
> (ಮಹಾಭಾರತ, ವನಪರ್ವ)
>
> *ಎಲ್ಲ ವರ್ಣಗಳ ಸಂಕರವಾಗಿರುವುದರಿಂದ ಜಾತಿಯಿಂದಲೇ ಯಾರನ್ನೂ ತಿಳಿಯುವ ಕಾಲ ಹೋಯಿತು. ಆದ್ದರಿಂದ ಶೀಲದಿಂದಲೇ ವ್ಯಕ್ತಿಯನ್ನು ಗುರುತಿಸಬೇಕೆಂದು ಜ್ಞಾನಿಗಳು ಹೇಳುತ್ತಾರೆ.*

## ಕರ್ಮವಿಭಾಗ

ಪುರುಷಸೂಕ್ತದ ಈ ಪ್ರಶ್ನೆಗಳೂ ಉತ್ತರಗಳೂ ಕರ್ಮಗಳ ವಿಭಾಗವನ್ನು ತೋರಿಸುತ್ತವೆ. ಮುಖದಿಂದ ಅಧ್ಯಯನ-ಅಧ್ಯಾಪನ ಮಾಡುವಂತೆ, ಬ್ರಾಹ್ಮಣನಾದರೂ ವೇದಗಳ ಅಧ್ಯಯನವನ್ನು ಪೂರೈಸಿ ಅಧ್ಯಾಪನ ಮಾಡತಕ್ಕದ್ದು. ಭುಜ ಅಥವಾ ತೋಳುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವಂತೆ ಕ್ಷತ್ರಿಯನು ಎಲ್ಲರನ್ನು ರಕ್ಷಿಸತಕ್ಕದ್ದು. ತೊಡೆಗಳ ಆಧಾರದ ಮೇಲೆ ಕುಳಿತುಕೊಳ್ಳುವಂತೆ ವೈಶ್ಯನು ಎಲ್ಲರ ಸ್ಥಿತಿಗಾಗಿ ವ್ಯಾಪಾರ, ಕೃಷಿ ಮಾಡತಕ್ಕದ್ದು. ಕಾಲುಗಳಿಂದ ಸಂಚರಿಸಿ ಅಗತ್ಯವಾದುದನ್ನು ಒದಗಿಸಿಕೊಳ್ಳುವಂತೆ ಶೂದ್ರನು ಎಲ್ಲರ ಸೇವೆ ಮಾಡತಕ್ಕದ್ದು. ಇದು ಅಂದಿನ ಮೊದಲ ವ್ಯವಸ್ಥೆಯಾಗಿತ್ತು.

ಗೀತೆಯಲ್ಲಿ ಈ ಮಾತಿಗೆ ಸ್ವಲ್ಪ ವಿವರಣೆ ದೊರೆಯುತ್ತದೆ (ಗೀತಾ ೧೮.೪೧-೪೪) : ಮನೋನಿಗ್ರಹ, ಇಂದ್ರಿಯ ನಿಗ್ರಹ, ತಪಸ್ಸು (ಅಧ್ಯಯನ-ಅಧ್ಯಾಪನ) ಶುಚಿಯಾಗಿರುವುದು, ಕ್ಷಮೆ, ಸರಳತೆ, ಜ್ಞಾನ, ವಿಜ್ಞಾನ ಮತ್ತು ಆಸ್ತಿಕತೆ ಬ್ರಾಹ್ಮಣನ ಕಾರ್ಯಗಳು. ಶೌರ್ಯ, ಪರಾಕ್ರಮ (ಪ್ರತಾಪ), ಧೈರ್ಯ, ದಕ್ಷತೆ, ಯುದ್ಧದಲ್ಲಿ ಓಡಿಹೋಗದಿರುವುದು, ದಾನ, ಒಡೆತನ ಕ್ಷತ್ರಿಯನ ಕರ್ತವ್ಯಗಳು. ಕೃಷಿ, ಗೋಸೇವೆ, ವ್ಯಾಪಾರ ವೈಶ್ಯನ ಕೆಲಸಗಳು. ಪರಿಚರ್ಯಾ ಅಥವಾ ಸೇವೆ ಶೂದ್ರನು ಮಾಡಬೇಕಾದುದು. ಪುರುಷಸೂಕ್ತದಲ್ಲಿ ಗೂಢವಾಗಿದ್ದುದು ಗೀತೆಯಲ್ಲಿ ವಾಚ್ಯವಾಗಿದೆ ಎಂಬುದು ಸ್ಪಷ್ಟ.

ಹೀಗೆ ಗುಣಗಳ ಆಧಾರದ ಮೇಲೆ ಉದ್ಯೋಗವನ್ನು ವಿಭಜಿಸಿ ವರ್ಣಗಳ ಸೃಷ್ಟಿಯಾದರೂ, ಅವು ಹಾಗೆಯೇ ಉಳಿದು ಬಂದಿಲ್ಲ. ಬ್ರಾಹ್ಮಣನು ಸಾತ್ತ್ವಿಕನೇ ಆಗಿರುವುದಾಗಲಿ, ಶೂದ್ರನು ತಾಮಸನೇ ಆಗಿರುವುದಾಗಲಿ ನಮ್ಮ ದೈನಂದಿನ ಅನುಭವದಲ್ಲಿ ಕಾಣುವುದಿಲ್ಲ. ಯುದ್ಧದಲ್ಲಿ ಓಡಿಹೋಗುತ್ತಿದ್ದ ಉತ್ತರಕುಮಾರನನ್ನು ಬೃಹನ್ನಳೆ ರಕ್ಷಿಸಬೇಕಾಯಿತು. ಆಚಾರ್ಯರಾದ ದ್ರೋಣರು ಬಿಲ್ಲು ಹಿಡಿದು ಹೋರಾಡುವ ಸಂದರ್ಭ ಒದಗಿ ಬಂದಿತ್ತು. ಶೂದ್ರನಾದ ವಿದುರ ಅಸಾಧಾರಣವಾದ ನೈತಿಕ ಧೈರ್ಯವನ್ನು ತೋರಿ ಪಾಂಡವರಿಗೂ ಶ್ರೀಕೃಷ್ಣನಿಗೂ ಆಪ್ತನಾಗಿದ್ದ!

ಸವರ್ಣದಿಂದ ಸವರ್ಣೀಯರಲ್ಲಿ ಸವರ್ಣೀಯರಾದವರು ಹುಟ್ಟುತ್ತಾರೆ : ಸವರ್ಣೇಭ್ಯಃ ಸವರ್ಣಾಸು ಜಾಯಂತೇ ಹಿ ದ್ವಿಜಾದಯಃ | ಆದರೆ ಅನುಲೋಮ ಹಾಗೂ ಪ್ರತಿಲೋಮ ಸಂಬಂಧದಿಂದ ವರ್ಣದ ವ್ಯತ್ಯಾಸವಾಗುತ್ತದೆ. ಇಂದ್ರಿಯಗಳು ಬಲವತ್ತರವಾದುದರಿಂದ ಬೇರೆಯ ಜಾತಿಯ ಸ್ತ್ರೀಪುರುಷರ ಸಂಬಂಧ ಬೆಳೆಸುವುದು ಎಲ್ಲಾ ಕಾಲದಲ್ಲಿಯೂ ಇದೆ. ಇದರಿಂದಾಗಿ ವರ್ಣವ್ಯವಸ್ಥೆ ಅಸ್ತವ್ಯಸ್ತವಾಗುವುದು ಸಹಜವೇ ಆಗಿದೆ (ಯಾಜ್ಞವಲ್ಕ್ಯ ಸ್ಮೃತಿ).

## ವರ್ಣಗಳ ಮರ್ಯಾದೆ

ಹೀಗೆ ಸಂಕರ ಜಾತಿಗಳು ಹುಟ್ಟಿಕೊಂಡು ಅವುಗಳಿಂದಲೂ ಬೇರೆ ಬೇರೆ ಜಾತಿಗಳು ಉಂಟಾಗುವುದು ಪ್ರಕೃತಿಸಿದ್ಧವಾಗಿದ್ದು ಶಾಸ್ತ್ರದಲ್ಲಿ ಇವುಗಳಿಗೆ ಪ್ರತ್ಯೇಕವಾದ ಹೆಸರನ್ನೂ ಧರ್ಮವನ್ನೂ ವಿವರಿಸಿಲ್ಲ. ಆದರೆ ಅನುಲೋಮ ಜಾತಿಯವರು ಯೋಗ್ಯರೆಂದೂ, ಪ್ರತಿಲೋಮ ಜಾತಿಯವರು ಅಯೋಗ್ಯರೆಂದೂ ತಿಳಿಸಿದ್ದಾರೆ.

ಹೀಗೆ ಜಾತಿಯನ್ನು ಕುರಿತಂತೆ ಧರ್ಮಶಾಸ್ತ್ರದಲ್ಲಿ ಸ್ಪಷ್ಟವಾದ ವಿವರಣೆಯಿದೆ. ಬ್ರಾಹ್ಮಣನಾಗಿದ್ದು ಬ್ರಾಹ್ಮಣಧರ್ಮವನ್ನು ಅನುಸರಿಸದಿದ್ದರೆ ಅವನು ದುರ್ಬ್ರಾಹ್ಮಣನೆಂದೆನಿಸಿ ಶೂದ್ರ ಕರ್ಮಕ್ಕೆ ಅರ್ಹನಾಗುತ್ತಾನೆ. ಸ್ವಧರ್ಮಪಾಲನೆಯನ್ನು ಗೀತೆಯು ಉಪದೇಶಿಸುತ್ತದೆ— ಶ್ರೇಯಾನ್ ಸ್ವಧರ್ಮೋ ವಿಗುಣಃ (ಗೀತಾ, ೩.೩೫). ಸಮಾಜದಲ್ಲಿ ತನ್ನ ಪಾಲಿಗೆ ಬಂದ ಕರ್ತವ್ಯವನ್ನು ಮಾಡುವುದು ಸ್ವಧರ್ಮ. ಅದು ಪರಧರ್ಮವು ಭಯವನ್ನು ಹುಟ್ಟಿಸುವುದೆಂದು ತಿಳಿಸುತ್ತದೆ. ಪರಿಪೂರ್ಣವಾಗಿ ಮಾಡಲಾಗದಿದ್ದರೂ, ಚೆನ್ನಾಗಿ ಮಾಡಿದ ಪರಧರ್ಮಕ್ಕಿಂತ ತನ್ನ ಧರ್ಮವೇ ಹೆಚ್ಚಿನದು. ಇದಕ್ಕೆ ಪ್ರಯೋಜನವೂ ಇದೆ. ತನ್ನ ತನ್ನ ಕರ್ಮ ಅಥವಾ ಧರ್ಮದ ಅನುಷ್ಠಾನವೇ ಸಿದ್ಧಿಯ ಸೋಪಾನ— ಸಂಸಿದ್ಧಿಂ ಲಭತೇ ನರಃ (ಗೀತಾ, ೧೮.೪೫).

> ಯತ್ರೈತಲ್ಲಕ್ಷ್ಯತೇ ಸರ್ಪ ವೃತ್ತಂ ಸ ಬ್ರಾಹ್ಮಣಃ ಸ್ಮೃತಃ |
> ಯತ್ರೈತನ್ನ ಭವೇತ್ಸರ್ಪ ತಂ ಶೂದ್ರ ಇತಿ ನಿರ್ದಿಶೇತ್ ||
>
> *ಯಾರಲ್ಲಿ ಈ ವೃತ್ತವು (ಚಾರಿತ್ರ್ಯವು) ಕಾಣುತ್ತದೆಯೋ ಅವನನ್ನು ಬ್ರಾಹ್ಮಣನೆನ್ನುವರು. ಯಾರಲ್ಲಿ ಇದು ಇಲ್ಲವೊ ಅವನನ್ನು ಶೂದ್ರನೆಂದು ಕರೆಯತಕ್ಕದ್ದು.* (ಮಹಾಭಾರತ, ವನಪರ್ವ)